ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಗುಂಡ್ಲುಪೇಟೆ

**ಸಿಸಿ ನಂಃ 721/2022**

| | | |
|---|---|---|
| ಸಾಕ್ಷಿದಾರರ ಹೆಸರು | ಪಿ.ಸುಜಾತ | ಪ್ರಮಾಣ ವಚನ ಬೋಧಿಸಿದ ದಿನಾಂಕಃ 13.02.2025 |
| ತಂದೆಯ ಹೆಸರು/ ಗಂಡನ ಹೆಸರು | ಲೇಟ್. ಸತ್ಯನಾರಾಯಣ | |
| ವಯಸ್ಸು | 63 ವರ್ಷ | |
| ಉದ್ಯೋಗ | ನಿವೃತ್ತ ಪಿ.ಎಸ್.ಐ | ಪ್ರಾಸಾಃ 1 |
| ವಾಸ | ಚಾಮರಾಜನಗರ | ಚಾಸಾಃ 1 |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ನಾನು ಆಗಸ್ಟ್ 2020 ರಿಂದ ಜನವರಿ 2023 ರವರೆಗೆ ಅಪರಾಧ ವಿಭಾಗದ ಪಿ.ಎಸ್.ಐ ಗುಂಡ್ಲುಪೇಟೆ ಪೊ.ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 08.09.2022 ರಂದು ಗುಂಡ್ಲುಪೇಟೆ ಪಟ್ಟಣದ ಕೆ.ಆರ್.ಸಿ. ರಸ್ತೆಯಲ್ಲಿ ಶ್ರೀ ಪ್ರತಿಷ್ಠಾಪನೆ ಮಾಡಿರುವ ವಿದ್ಯಾಗಣಪತಿ ವಿಸರ್ಜನೆ ಸಂಬಂಧ ಮೆರವಣಿಗೆ ಕರ್ತವ್ಯಕ್ಕೆ ಮಾನ್ಯ ಪಿ.ಐ ರವರು ನನ್ನನ್ನು ಹಾಗೂ ನಮ್ಮ ಕ್ರೈಂ ಸಿಬ್ಬಂದಿಗಳಾದ ಹೆಚ್.ಸಿ. 103, 136 ಮತ್ತು ಪಿ.ಸಿ. 196 ರವರನ್ನು ನನ್ನ ಜೊತೆ ಕರ್ತವ್ಯಕ್ಕೆ ಕಳುಹಿಸಿದ್ದು, ಸಂಜೆ 7.00 ಗಂಟೆ ಸಮಯದಲ್ಲಿ ನಮ್ಮ ಪಿ.ಐ ರವರು ನನ್ನನ್ನು ಕರೆದು ವೀರನಪುರ ಕಾಲೋನಿಯಲ್ಲಿ ಗಣಪತಿ ವಿಸರ್ಜನಾ ಮೆರವಣಿಗೆಯನ್ನು ಯಾವುದೇ ಪೂರ್ವಾನುಮತಿ ಪಡೆಯದೆ ಡಿ.ಜೆ ಧ್ವನಿವರ್ಧಕ ಉಪಯೋಗಿಸಿ ಸಾರ್ವಜನಿಕರಿಗೆ ತೊಂದರೆ ಉಂಟು ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ ಎಂದು ಹೇಳಿ ನಮ್ಮನ್ನು ಅಲ್ಲಿಗೆ ಕಳುಹಿಸಿಕೊಟ್ಟಿರುತ್ತಾರೆ. ನಾನು ನಮ್ಮ ಸಿಬ್ಬಂದಿಗಳ ಜೊತೆಗೆ ವೀರನಪುರ ಕಾಲೋನಿಗೆ ಹೋಗಿದ್ದು, ಅಲ್ಲಿ ಯಾವುದೇ ಪೂರ್ವಾನುಮತಿ ಇಲ್ಲದೆ ಟಾಟಾ ಏಸಿ ವಾಹನದಲ್ಲಿ ಡಿ.ಜೆ. ಸಲಕರಣೆಗಳನ್ನು ಇಟ್ಟುಕೊಂಡು ಅತೀಯಾದ ಶಬ್ದ ಉಂಟಾಗುವ ರೀತಿಯಲ್ಲಿ ಅದನ್ನು ಹಾಕಿಕೊಂಡು ಸಾರ್ವಜನಿಕರಿಗೆ ಶಬ್ದ ಮಾಲಿನ್ಯ ಉಂಟು ಮಾಡುತ್ತಿದ್ದ ಪ್ರವೀಣ, ಮಾದೇಶ ಮತ್ತು ತೇಜಾ ಎಂಬುವರನ್ನು ನಮ್ಮ ವಶಕ್ಕೆ ಪಡೆದಿರುತ್ತೇನೆ. ಟಾಟಾ ಏಸಿ ಗೂಡ್ಸ್ ವಾಹನದ ಸಂಖ್ಯೆ ಕೆಎ-10-5946 ಇರುತ್ತದೆ. ನನ್ನ ವಶಕ್ಕೆ ಪಡೆದ ಮೂರು ಜನರನ್ನು ಹಾಗೂ ಟಾಟಾ ಏಸಿ ಗೂಡ್ಸ್ ವಾಹನ ಮತ್ತು ಡಿ.ಜೆ. ಸಾಮಾಗ್ರಿಗಳನ್ನು ಠಾಣೆಗೆ ತೆಗೆದುಕೊಂಡು ಬಂದು ಈ ಬಗ್ಗೆ ಠಾಣಾಧಿಕಾರಿಗಳವರಿಗೆ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು, ಅದನ್ನು ನಿಪಿ-1 ಎಂದು ಮತ್ತು ಅದರಲ್ಲಿ ಇರುವ ಸಾಕ್ಷಿದಾರರ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದಿಃ 10.09.2022 ರಂದು ತನಿಖಾಧಿಕಾರಿಗಳು ಗುಂಡ್ಲುಪೇಟೆ ಪೊ.ಠಾಣಾ ಆವರಣದಲ್ಲಿ ಪಂಚರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಆ ದಿನ ನಮ್ಮ ವಶಕ್ಕೆ ಪಡೆದ ಟಾಟಾ ಏಸಿ ಗೂಡ್ಸ್ ವಾಹನ ಹಾಗೂ ಡಿ.ಜೆ. ಪ್ರಕರಣಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಮಹಜರ್ ನ್ನು ಬೆ. 9.00 ರಿಂದ 10.00 ಗಂಟೆಯವರೆಗೆ ಸಾಕ್ಷಿದಾರರಾದ ರಾಜು ಮತ್ತು ಚೆನ್ನಯ್ಯ ಎಂಬುವರ ಸಮಕ್ಷಮ ಜರುಗಿಸಿರುತ್ತಾರೆ. ಸದರಿ ಮಹಜರ್ ನ್ನು ನೋಡುತ್ತಿದ್ದು, ಅದನ್ನು ನಿಪಿ-2 ಎಂದು ಮತ್ತು ಅದರಲ್ಲಿ ಇರುವ ಸಾಕ್ಷಿದಾರರ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಆ ದಿನ ನನ್ನ ವಶಕ್ಕೆಪಡೆದ ಆರೋಪಿಗಳನ್ನು ಹಾಗೂ ಟಾಟಾ ಏಸಿ ಗೂಡ್ಸ್ ವಾಹನ ಹಾಗೂ ಡಿ.ಜೆ. ಸಲಕರಣೆಗಳನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಡಿ ವಕೀಲರಿಂದಃ**

ನಾವು ಘಟನಾ ಸ್ಥಳಕ್ಕೆ ಹೋಗಿರುವ ಬಗ್ಗೆ ಠಾಣಾ ರಿಜಿಸ್ಟರ್ ನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ನಾವು ಘಟನಾ ಸ್ಥಳಕ್ಕೆ ಹೋದಾಗ ಸಂಜೆ 7.00 ಗಂಟೆಯಾಗಿರುತ್ತದೆ. ಗಣೇಶನ ವಿಸರ್ಜನೆ ಮೆರವಣಿಗೆ ಯಾವ ಕಡೆಯಿಂದ ಯಾವ ಕಡೆಗೆ ಸಾಗುತ್ತಿತ್ತು ಎಂದು ಹೇಳಲು ಬರುವುದಿಲ್ಲ. ಗಣೇಶನ ವಿಸರ್ಜನಾ ಸಮಯದಲ್ಲಿ ಸಾಕಷ್ಟು ಜನರು ಸೇರಿರುತ್ತಾರೆ ಎಂದರೆ ಸರಿ. ಸಾರ್ವಜನಿಕರಿಂದ ಡಿ.ಜೆ. ಉಪಕರಣಗಳು ಯಾರಿಗೆ ಸಂಬಂಧಿಸಿದ್ದು ಎಂಬ ಬಗ್ಗೆ ತಿಳಿದುಕೊಂಡಿರುತ್ತೇನೆ. ಗ್ರಾಮದ ಮುಖ್ಯಸ್ಥರಿಂದ ವಿಸರ್ಜನಾ ಮೆರವಣಿಗೆಯ ಮುಂದಾಳತ್ವವನ್ನು ಆರೋಪಿಗಳು ವಹಿಸಿದ್ದರು ಎಂಬ ಬಗ್ಗೆ ತಿಳಿದುಕೊಂಡಿರುತ್ತೇನೆ. ಘಟನಾ ಸ್ಥಳದಲ್ಲಿ ಟಾಟಾ ಏಸಿ ವಾಹನ, ನಾಲ್ಕು ಸೌಂಡ್ ಬಾಕ್ಸ್ ಗಳನ್ನು ಹಾಗೂ ಎಂಪ್ಲಿಫೈಯರ್ ನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ಘಟನಾ ಸ್ಥಳದಲ್ಲಿ ಆರೋಪಿಗಳು ಡಿ.ಜೆ. ಉಪಕರಣಗಳನ್ನು ಬಳಸಿರುವುದಿಲ್ಲ, ನಾನು ಡಿ.ಜೆ. ಉಪಕರಣಗಳನ್ನು ಬಳಸಿರುತ್ತಾರೆ ಎಂದು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಅಮಾನತ್ತುಪಡಿಸಿಕೊಂಡ ಉಪಕರಣಗಳು ಡಿ.ಜೆ. ಉಪಕರಣಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಅತಿಯಾಗಿ ಶಬ್ದ ಮಾಲಿನ್ಯ ಉಂಟು ಮಾಡುವ ಯಾವುದೇ ಉಪಕರಣಗಳನ್ನು ಬಳಸಿರುವುದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿ. ಘಟನಾ ಸ್ಥಳದಲ್ಲಿ ಯಾವುದೇ ಘಟನೆ ಆಗದೇ ಇರುವುದರಿಂದ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಮಾನತ್ತು ಮಹಜರ್ ನ್ನು ಪೊ.ಠಾಣೆಯಲ್ಲಿ ಮಾಡಲಾಗಿರುತ್ತದೆ. ಮಹಜರ್ ಗೆ ನಾನು, ರಾಜು ಮತ್ತು ಚೆನ್ನಯ್ಯ ರವರು ಸಹಿ ಮಾಡಿರುತ್ತೇವೆ. ಮಹಜರ್ ನ್ನು ನಮ್ಮ ಪೊಲೀಸ್ ಸಿಬ್ಬಂದಿ ಬರೆದಿದ್ದು, ಅವರ ಹೆಸರನ್ನು ಹೇಳಲು ಬರುವುದಿಲ್ಲ. ನನ್ನ ಸಮ್ಮುಖದಲ್ಲಿ ಮಹಜರ್ ಸಾಕ್ಷಿದಾರರಿಗೆ ನೋಟೀಸ್ ನೀಡಿರುವುದಿಲ್ಲ.

ಆರೋಪಿಗಳು ಯಾವುದೇ ಅಪರಾಧ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಡಿ.ಜೆ. ಉಪಕರಣಗಳನ್ನು ಉಪಯೋಗಿಸಿ ಶಬ್ದ ಮಾಲಿನ್ಯ ಉಂಟು ಮಾಡದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಪೊ.ಠಾಣೆಯಲ್ಲಿ ಯಾವುದೇ ಅಮಾನತ್ತು ಮಹಜರ್ ನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗಳನ್ನು ನನ್ನ ವಶಕ್ಕೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಜೆಎಂಎಫ್ ಸಿ
ಗುಂಡ್ಲುಪೇಟೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಗುಂಡ್ಲುಪೇಟೆ

**ಸಿಸಿ ನಂಃ 721/2022**

| | | |
|---|---|---|
| ಸಾಕ್ಷಿದಾರರ ಹೆಸರು | ಚೆನ್ನಸ್ವಾಮಿ | ಪ್ರಮಾಣ ವಚನ ಬೋಧಿಸಿದ ದಿನಾಂಕಃ 13.02.2025 |
| ತಂದೆಯ ಹೆಸರು/ ಗಂಡನ ಹೆಸರು | ಲೇಟ್ ಗಿರಿಶೆಟ್ಟಿ | |
| ವಯಸ್ಸು | 44 ವರ್ಷ | |
| ಉದ್ಯೋಗ | ಹೆಚ್.ಸಿ. ಗುಂಡ್ಲುಪೇಟೆ ಪೊ.ಠಾಣೆ | ಪ್ರಾಸಾಃ 2 |
| ವಾಸ | ಗುಂಡ್ಲುಪೇಟೆ | ಚಾಸಾಃ 2 |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ಈಗ್ಗೆ ನಾಲ್ಕು ವರ್ಷಗಳಿಂದ ಹೆಚ್.ಸಿ. ಆಗಿ ಗುಂಡ್ಲುಪೇಟೆ ಪೊ.ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 08.09.2022 ರಂದು ಗುಂಡ್ಲುಪೇಟೆ ಪಟ್ಟಣದ ಕೆ.ಆರ್.ಸಿ. ರಸ್ತೆಯಲ್ಲಿ ಪ್ರತಿಷ್ಠಾಪನೆ ಮಾಡಿರುವ ಶ್ರೀ ವಿದ್ಯಾಗಣಪತಿ ವಿಸರ್ಜನೆ ಸಂಬಂಧ ಮೆರವಣಿಗೆ ಕರ್ತವ್ಯಕ್ಕೆ ಮಾನ್ಯ ಪಿ.ಐ ರವರು ನನ್ನನ್ನು ಹಾಗೂ ನಮ್ಮ ಪಿ.ಎಸ್.ಐ., ಸುಜಾತ ಹಾಗೂ ಹೆಚ್.ಸಿ.136 ಮತ್ತು ಪಿ.ಸಿ. 196 ರವರನ್ನು ಕರ್ತವ್ಯಕ್ಕೆ ನೇಮಿಸಿದ್ದು, ಸಂಜೆ 7.00 ಗಂಟೆ ಸಮಯದಲ್ಲಿ ನಮ್ಮ ಪಿ.ಐ ರವರು ನಮ್ಮನ್ನು ಕರೆದು ವೀರನಪುರ ಕಾಲೋನಿಯಲ್ಲಿ ಗಣಪತಿ ವಿಸರ್ಜನಾ ಮೆರವಣಿಗೆಯನ್ನು ಯಾವುದೇ ಪೂರ್ವಾನುಮತಿ ಪಡೆಯದೆ ಡಿ.ಜೆ ಧ್ವನಿವರ್ಧಕ ಉಪಯೋಗಿಸಿ ಸಾರ್ವಜನಿಕರಿಗೆ ತೊಂದರೆ ಉಂಟು ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ ಎಂದು ಹೇಳಿ ನಮ್ಮನ್ನು ಅಲ್ಲಿಗೆ ಕಳುಹಿಸಿಕೊಟ್ಟಿರುತ್ತಾರೆ. ನಾನು, ನಮ್ಮ ಪಿ.ಎಸ್.ಐ., ಸುಜಾತ ಹಾಗೂ ಹೆಚ್.ಸಿ. 136 ಮತ್ತು ಪಿ.ಸಿ. 196 ರವರು ವೀರನಪುರ ಕಾಲೋನಿಗೆ ಹೋಗಿದ್ದು, ಅಲ್ಲಿ ಯಾವುದೇ ಪೂರ್ವಾನುಮತಿ ಇಲ್ಲದೆ ಟಾಟಾ ಏಸಿ ನಂ. ಕೆಎ-10-5946 ನೇದ್ದರಲ್ಲಿ ಡಿ.ಜೆ. ಸಲಕರಣೆಗಳನ್ನು ಇಟ್ಟುಕೊಂಡು ಅತೀಯಾದ ಶಬ್ದ ಉಂಟಾಗುವ ರೀತಿಯಲ್ಲಿ ಅದನ್ನು ಹಾಕಿಕೊಂಡು ಸಾರ್ವಜನಿಕರಿಗೆ ಶಬ್ದ ಮಾಲಿನ್ಯ ಉಂಟು ಮಾಡುತ್ತಿದ್ದರು. ನಾವು ಅಲ್ಲಿಗೆ ಹೋಗಿ ಅಲ್ಲಿದ್ದ ಸಾರ್ವಜನಿಕರನ್ನು ವಿಚಾರಣೆ ಮಾಡಲಾಗಿ ಸದರಿ ವಿಸರ್ಜನಾ ಮೆರವಣಿಗೆ ಮುಖಂಡತ್ವವನ್ನು ಪ್ರವೀಣ, ಮಾದೇಶ ಮತ್ತು ತೇಜಾ ಎಂಬುವರು ವಹಿಸಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ನಾವು ಟಾಟಾ ಏಸಿ ಗೂಡ್ಸ ವಾಹನ ಅದರಲ್ಲಿ ಇದ್ದ ಎರಡು ಸೌಂಡ್ ಬಾಕ್ಸ್ ಆಂಪ್ಲಿಫೈಯರ್, ಎರಡು ಫೋಕಸ್ ಲೈಟ್, ಒಂದು

ಮೈಕು ಇವುಗಳನ್ನು ಹಾಗೂ ಆರೋಪಿಗಳಾದ ಪ್ರವೀಣ, ಮಾದೇಶ ಮತ್ತು ತೇಜಾ ಇವರುಗಳನ್ನು ಕರೆದುಕೊಂಡು ಠಾಣೆಗೆ ಬಂದಿರುತ್ತೇವೆ. ಸದರಿ ಘಟನೆಯ ಬಗ್ಗೆ ಪಿ.ಎಸ್.ಐ ಸುಜಾತ ರವರು ಠಾಣಾಧಿಕಾರಿಗಳವರಿಗೆ ವರದಿಯನ್ನು ನೀಡಿರುತ್ತಾರೆ. ಈ ಬಗ್ಗೆ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ.

ಆ ದಿನ ಪೂರ್ವಾನುಮತಿ ಇಲ್ಲದೆ ಧ್ವನಿ ವರ್ಧಕಗಳನ್ನು ಬಳಸಿ ಶಬ್ದ ಮಾಲಿನ್ಯ ಉಂಟು ಮಾಡುತ್ತಿದ್ದ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಆ ದಿನ ಪೊ.ಠಾಣೆಗೆ ತೆಗೆದುಕೊಂಡು ಬಂದ ಟಾಟಾ ಏಸಿ ಮತ್ತು ಡಿ.ಜೆ. ಉಪಕರಣಗಳನ್ನು ನೋಡಿದರೆ ಗುರುತಿಸುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಡಿ ವಕೀಲರಿಂದಃ</u>**

ನಾವು ಘಟನಾ ಸ್ಥಳಕ್ಕೆ ಹೋಗಿರುವ ಬಗ್ಗೆ ಠಾಣಾ ರಿಜಿಸ್ಟರ್ ನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ನಾವು ಘಟನಾ ಸ್ಥಳಕ್ಕೆ ಹೋದಾಗ ಸಂಜೆ 7.30 ಗಂಟೆಯಾಗಿರುತ್ತದೆ. ಗಣೇಶನ ವಿಸರ್ಜನೆ ಮೆರವಣಿಗೆ ಪಶ್ಚಿಮ ದಿಕ್ಕಿನಿಂದ ಪೂರ್ವದ ಕಡೆಗೆ ಸಾಗುತ್ತಿತ್ತು. ಗಣೇಶನ ವಿಸರ್ಜನಾ ಸಮಯದಲ್ಲಿ ಸಾಕಷ್ಟು ಜನರು ಸೇರಿರುತ್ತಾರೆ ಎಂದರೆ ಸರಿ. ಅಲ್ಲಿ ನಾವು ವಿಚಾರಣೆ ಮಾಡಿದ ಸಾರ್ವಜನಿಕರ ಹೆಸರನ್ನು ಹೇಳಲು ಬರುವುದಿಲ್ಲ. 1 ಮತ್ತು 2 ನೇ ಆರೋಪಿಗಳು ವೀರನಪುರ ಕಾಲೋನಿಯ ವಾಸಿಗಳು ಎಂದರೆ ಸರಿ. ಘಟನಾ ಸ್ಥಳದಲ್ಲಿ ಟಾಟಾ ಏಸಿ ವಾಹನ ಎರಡು ಸೌಂಡ್ ಬಾಕ್ಸ್ ಗಳು, ಎರಡು ಪೋಕಸ್ ಲೈಟ್, ಒಂದು ಮೈಕ್ ಮತ್ತು ಒಂದು ಆಂಪ್ಲಿಫೈಯರ್ ನ್ನು ವಶಪಡಿಸಿಕೊಂಡಿರುತ್ತೇವೆ. ಘಟನಾ ಸ್ಥಳದಲ್ಲಿ ಡಿ.ಜೆ. ಉಪಕರಣಗಳನ್ನು ವಶ ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಡಿ.ಜೆ. ಉಪಕರಣಗಳನ್ನು ನಮ್ಮ ವಶಕ್ಕೆ ಪಡೆಯುವ ಸಮಯದಲ್ಲಿ ಯಾವುದೇ ಮಹಜರ್ ಜರುಗಿಸಿರುವುದಿಲ್ಲ ಎಂದರೆ ಸರಿ. ಚಾಸಾ–1 ನಮ್ಮ ಮೇಲಾಧಿಕಾರಿಗಳು ಎಂದರೆ ಸರಿ. ಚಾಸಾ–1 ರವರು ನಮ್ಮ ಮೇಲಾಧಿಕಾರಿಗಳು ಆಗಿರುವುದರಿಂದ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಘಟನಾ ಸ್ಥಳದಲ್ಲಿ ಆರೋಪಿಗಳು ಡಿ.ಜೆ. ಉಪಕರಣಗಳನ್ನು ಬಳಸಿರುವುದಿಲ್ಲ, ನಾನು ಡಿ.ಜೆ. ಉಪಕರಣಗಳನ್ನು ಬಳಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಆ ದಿನ ವಶಪಡಿಸಿಕೊಂಡಿರುತ್ತೇವೆ ಎಂದು ಹೇಳುವ ಉಪಕರಣಗಳು ಡಿ.ಜೆ. ಉಪಕರಣಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಅತಿಯಾಗಿ ಶಬ್ದ ಮಾಲಿನ್ಯ ಉಂಟು ಮಾಡುವ ಯಾವುದೇ ಉಪಕರಣಗಳನ್ನು ಬಳಸಿರುವುದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿ. ಘಟನಾ ಸ್ಥಳದಲ್ಲಿ ಯಾವುದೇ ಘಟನೆ ಆಗದೇ ಇರುವುದರಿಂದ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಗಳು ಯಾವುದೇ ಅಪರಾಧ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಡಿ.ಜೆ. ಉಪಕರಣಗಳನ್ನು ಉಪಯೋಗಿಸಿ ಶಬ್ದ ಮಾಲಿನ್ಯ ಉಂಟು ಮಾಡದೇ ಇದ್ದರೂ ಸಹ ಅವರ ವಿರುದ್ಧ ಚಾಸಾ–1 ರವರು ಸುಳ್ಳು ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಜೆಎಂಎಫ್ ಸಿ
ಗುಂಡ್ಲುಪೇಟೆ.